ದಿನಾಂಕ 07-10-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ** ಪ್ರತಿವಾದಿ 1 ಮತ್ತು 2 ರ ಪರ ಶ್ರೀ ಎಸ್.ಆರ್.ಬಿ. ವಕೀಲರಿಂದ

17. 1935 ರಲ್ಲಿ ಆವು ಯಶವಂತ ಆಚಾರಿ ರವರ ಹೆಸರಿನಲ್ಲಿ ದಾವಾ ಎ ಮತ್ತು ಬಿ ಶೆಡ್ಯೂಲ್ ಸ್ವತ್ತುಗಳು ವಾರಸ್ಸಾ ನಾತೆಯಿಂದ ಮ್ಯೂಟೇಷನ್ ದಾಖಲಾಯಿತು. 1990 ರಲ್ಲಿ ಮನೋಹರ ಕೃಷ್ಣ ಆಚಾರಿ ಹೆಸರಿಗೆ ಒಂದು ಕೊಟ್ಟ ವಾಂಟಣಿ ಪತ್ರ ಮಾತಿ ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮಿಲಾಗಿ ದಾವಾ ಶೆಡ್ಯೂಲ್ ನ ಸರ್ವೆ ನಂ. 102 ಅ/ಬ ಹಿಸ್ಸಾ 74 ಆಸ್ತಿಯಲ್ಲಿ 5 ಗುಂಟೆ ಕೊಟ್ಟಿರುತ್ತಾರೆ. ನನ್ನ ತಂದೆಯವರು 2003 ರಲ್ಲಿ ಮರಣ ಹೊಂದಿರುತ್ತಾರೆ. ಆವು ಯಶವಂತ ಆಚಾರಿಯವರು 1977 ರಲ್ಲಿ ಮೃತಪಟ್ಟಿರುತ್ತಾರೆ. ದಾವಾ ಎ ಯ 3 ನೇ ಐಟಂ ಮಾತ್ರ ಪಿತಾರ್ಜಿತ ಆಸ್ತಿ ಎಂದರೆ ಸಾಕ್ಷಿ ಎಲ್ಲ ಆಸ್ತಿಗಳು ಪಿತಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಅವರ್ಸಾ ಮುಖ್ಯ ಮಾರುಕಟ್ಟೆಯಿಂದ ಸದ್ರಿ ಜಮೀನು 1 ಕಿ.ಮಿ. ದೂರದಲ್ಲಿದೆ ಎಂದರೆ ಸಾಕ್ಷಿ 1/2 ಕಿ.ಮಿ. ದೂರದಲ್ಲಿದೆ ಎಂದು ನುಡಿಯುತ್ತಾರೆ. ದಾವಾ ಬಿ ಶೆಡ್ಯೂಲ್ ನ ಐಟಂ ನಂ.3 ಸ್ವತ್ತನ್ನು ನನ್ನ ತಂದೆಗೆ ಸರಸ-ನಿರಸ ವಾಂಟಣಿ ಮೂಲಕ 1990 ರಲ್ಲಿ ನೀಡಲಾಗಿರುವುದು ಎಂದರೆ ಸಾಕ್ಷಿ ಉಳಿದ ಆಸ್ತಿಯನ್ನು ಒಟ್ಟಿಗೆ ಇಟ್ಟುಕೊಂಡು ಆಮೇಲೆ ಕೊಡಲಾಗುವುದು ಹೇಳಿದ್ದರು ಎಂದು ನುಡಿಯುತ್ತಾರೆ. ನನ್ನ ಅಜ್ಜ ಮತ್ತು ಅಜ್ಜಿ ಆ ರೀತಿ ಹೇಳಿರುತ್ತಾರೆ. 1990 ರಲ್ಲಿ ವಾಂಟಣಿ ಪತ್ರ ಮಾಡುವಾಗ ನನ್ನ ತಂದೆ ಜೀವಂತ ಇದ್ದರು ಎಂದರೆ ಸಾಕ್ಷಿ ಜೀವಂತ ಇದ್ದರು ಮತ್ತೆ ಉಳಿದ ಆಸ್ತಿಯಲ್ಲಿ ಕೊಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಈ ವಿಷಯವನ್ನು ಯಾರು ನಿಖರವಾಗಿ ಹೇಳಿರುವುದು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ನನಗೆ ಹೇಳಿದ್ದಾರೆ ಎಂದು ನುಡಿಯುತ್ತಾರೆ.

18. 1990 ರ ನಂತರ ನನ್ನ ತಂದೆ ಜೀವಂತ ಇರುವ ತನಕ ಭಾಗವನ್ನು ನನ್ನ ತಂದೆ ಸುಮಾರು ಸಲ ಕೇಳಿದ್ದಾರೆ. ಸಾಕ್ಷಿ ಸ್ವತಹಃ ನನ್ನ ತಂದೆ ಉಪತಹಶೀಲ್ದಾರರಲ್ಲಿ ತಕರಾರು ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಆ ತಕರಾರಿಗೆ ಉಪತಹಶೀಲ್ದಾರರು ಕುಟುಂಬದ ಸದಸ್ಯರಲ್ಲ ಎಂದು ಆದೇಶ ಮಾಡಿದ್ದಾರೆ. ಆ ಆದೇಶದ ವಿರುದ್ಧ

ಮೇಲ್ಮನವಿ ಸಲ್ಲಿಸಿದ್ದೇವೆ. ನನಗೆ ಯಾವ ನ್ಯಾಯಾಲಯದಲ್ಲಿ ಆ ಮೇಲ್ಮನವಿ ಸಲ್ಲಿಸಿದ್ದು ಎಂದು ನೆನಪಿಲ್ಲ. ಆ ಆದೇಶದ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ನಾವು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ್ ನ್ಯಾಯಾಲಯದಲ್ಲಿ ಆದ ಆದೇಶದ ಪ್ರಕಾರ ನಾವು ಕುಟುಂಬದ ಸದಸ್ಯರಲ್ಲ ಎಂಬುದನ್ನು ಒಪ್ಪಿಕೊಂಡು ಈಗ ಮೇಲ್ಮನವಿ ಸಲ್ಲಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ದಿನಾಂಕ 20–02–2014 ರಂದು ನನ್ನ ವಕೀರಾದ ಅನಿಲ್ ಬಿ. ಮಹೇಕರ್ ಮೂಲಕ 1 ನೇ ಪ್ರತಿವಾದಿಗೆ ನೋಟಿಸ್ ಕೊಟ್ಟಿದ್ದೇನೆ ಎಂದರೆ ಸಾಕ್ಷಿ ಒಂದುಸಲ ನೋಟಿಸ್ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಆ ನೋಟಿಸಿಗೆ 1 ನೇ ಪ್ರತಿವಾಾದಿ ಅವರ ವಕೀಲರ ಮೂಲಕ ಉತ್ತರ ಕೊಟ್ಟಿದ್ದಾರೆ ಎಂದರೆ ಕೊಟ್ಟಿರಬಹುದು. ಆ ನೊಟೀಸನ್ನು ಎಲ್ಲ ಆಸ್ತಿಗಳು ಪಿತಾರ್ಜಿತ ಆಸ್ತಿಗಳಾಗಿರುವುದರಿಂದ ನಮಗೆ ಭಾಗ ಬರಲಿದೆ ಎಂದು ಕೊಟ್ಟಿದ್ದೇನೆ. ಈ ದಾವೆಯಲ್ಲಿರುವ ಎಲ್ಲಾ ಆಸ್ತಿಗಳನ್ನು ಆ ನೋಟಿಸಿನಲ್ಲಿ ತೋರಿಸಿದ್ದೇನೆ. ಆ ನೋಟಿಸನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಅವರ ಪರವಾಗಿ ನಿಶಾನೆಯಾಗಿರುವ ದಾಖೆಗಳನ್ನು ತೋರಿಸಿದ್ದಾಗ ಸಾಕ್ಷಿ ನಾನು ನೋಟಿಸ್ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಆ ನೋಟಿಸು ಮತ್ತು ಉತ್ತರ ನೋಟಿಸನ್ನು ನನಗೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ನೋಡುತ್ತೇನೆ ಎಂದು ನುಡಿಯುತ್ತಾರೆ. ಆ ಉತ್ತರ ನೋಟಿಸಿನಲ್ಲಿ ನಮಗೆ ಕೊಡಬೇಕಾದ ಹಕ್ಕನ್ನು ಸರಸ–ನಿರಸ ವಾಂಟಣಿ ಮೂಲಕ ನೀಡಲಾಗಿದ್ದು, ಕೊಡಲು ಯಾವುದೇ ಬಾಕಿ ಇಲ್ಲ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ನಾವು ಅದಕ್ಕೆ ಉತ್ತರ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಉತ್ತರ ನೋಟಿಸ್ ಕೊಟ್ಟ ನಂತರ ಈ ದಾವೆ ಸಲ್ಲಿಸುವ ತನಕ ಬೇರೆ ಯಾವುದೇ ದಾವೆಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಪ್ರತಿವಾದಿಗಳು ಕೊಡುತ್ತೇವೆ ಕೊಡುತ್ತೇವೆ ಎಂದು ತಳ್ಳಿ ಕೊಡದೆ ಇರುವುದರಿಂದ ಈಗ ದಾವೆ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಎ ಸ್ವತ್ತಿನ 3 ನೇ ಐಟಂ ಮಾತ್ರ ಪಿತಾರ್ಜಿತ ಆಸ್ತಿ ಎಂದು ಗೊತ್ತಿದ್ದುದ್ದರಿಂದ ಈ ದಾವೆ ಸಲ್ಲಿಸುವ ತನಕ ನಾವು ದಾವೆ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ.

20. ನಾನು ವಾದ ಪತ್ರದಲ್ಲಿ ತೋರಿಸಿದ ವಂಶಾವಳಿ ದಾವಾ ಎ ಶೆಡ್ಯೂಲ್ ಐಟಂ 3 ಕ್ಕೆ ಮಾತ್ರ ಸೀಮಿತ ಹಾಗೂ ಉಳಿದ ದಾವಾ ಸ್ವತ್ತಿಗೆ ಅನ್ವಯಾವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಯೇಸು ಯಾನೇ ಯಶವಂತ ಮೇಸ್ತಾ ದಾವೆಯ ಎಲ್ಲ ಸ್ವತ್ತುಗಳ ಸಂರಕ್ಷಿತ ರೈತ ಅಲ್ಲ ಎಂದರೆ ಸರಿಯಲ್ಲ. ಅವರು ದಾವ ಎ ಐಟಂ ನಂ.3 ಕ್ಕೆ ಮಾತ್ರ ಸಂರಕ್ಷಿತ ರೈತ ಆಗಿದ್ದರು ಎಂದರೆ ಸರಿಯಲ್ಲ. ಅವರು ಮೃತಪಟ್ಟ ನಂತರ ದಾವಾ ಎ ಶೆಡ್ಯೂಲ್ ನ 3 ನೇ ಐಟಂ ಅವರ ಹಿರಿಯ ಮಗನಾದ ರಾಮಾ ಯಶವಂತ ಆಚಾರಿ ಇವರ ಹೆಸರಿನಲ್ಲಿ ಅ.ಕು.ಮೆ. ನಾತೆಯಿಂದ ದಾಖಲಾಯಿತು ಎಂದರೆ ಸರಿ.

**ಮುಂದುವರಿದ ಪಾಟೀ ಸವಾಲನ್ನುಃ** ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.